ಪಿ.ಡಬ್ಲೂ–೧
ದಿ: ೨೭.೦೯.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎ.ಪಿ.ಆರ್. ವಕೀಲರಿಂದ,

ನಾನು ಬಿ.ಎ ಪದವಿ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಯನಗುಂಟೆ ಗ್ರಾಮದ ಮೂಲ ಸರ್ವೆ ನಂ.೩ ರ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ಯಾರ್‍ಯಾರ ಹೆಸರಿನಲ್ಲಿ ಎಷ್ಟೆಷ್ಟು ಇದೆ ಎಂದು ಗೊತ್ತಿಲ್ಲ ಎಂದರೆ ಸರಿ.

ದಾವಾ ಆಸ್ತಿ ನನಗೆ ಕ್ರಯದ ಮುಖಾಂತರ ಬಂದಿದೆ. ಮುನಿನಂಜಪ್ಪ ಇವರು ನನಗೆ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ. ಸೆಪ್ಟೆಂಬರ್ ೧೯೮೦ ರಲ್ಲಿ ಕ್ರಯ ಪತ್ರ ಆಗಿರುತ್ತದೆ, ದಿನಾಂಕ ನೆನಪಿಲ್ಲ. ದಾವಾ ಆಸ್ತಿ ಮೊದಲು ಮುನಿನಂಜಪ್ಪ ಹೆಸರಿನಲ್ಲಿತ್ತು. ಮುನಿನಂಜಪ್ಪ ಇವರು ಆಸ್ತಿಯನ್ನು ಕ್ರಯದ ಮುಖಾಂತರ ಪಡೆದಿದ್ದರು. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಬಳಿ ಮೂಲ ದಾಖಲೆಗಳು ಇಲ್ಲ ಎಂದರೆ ಸರಿ. ಸರ್ವೆ ನಂ.೩ರಲ್ಲಿ ನನ್ನ ಜಮೀನು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನ್ನನ್ನು ನಾನು ಸರ್ವೆ ಮಾಡಿಸಿಲ್ಲ.

ನನ್ನ ಆಸ್ತಿ ಸರ್ವೆ ನಂ.೩/೧೪ ಎಂದು ಇರುತ್ತದೆ. ಆಸ್ತಿ ಪೋಡಿ ಆಗದಿದ್ದರೆ ಸಬ್ ನಂಬರ್ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.೩/೮ ಎರಡು ಎಕರೆ ಇದು ೨ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಪ್ರತಿವಾದಿಯ ತಾತನಿಗೆ ಮಂಜೂರಾಗಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಅವರು ಮೃತರಾದ ನಂತರ ೨ನೇ ಪ್ರತಿವಾದಿ ಹೆಸರಿಗೆ ಪಹಣಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.೩/೮ ನೇದರ ಪೂರ್ವಕ್ಕೆ ಮುನಿಶ್ಯಾಮಿರವರ ಜಮೀನು, ಪಶ್ಚಿಮಕ್ಕೆ ಕೆರೆ ಅಂಗಳ, ಉತ್ತರಕ್ಕೆ ಕತ್ತಿ ಮಾರಮ್ಮ ದೇವಸ್ಥಾನ, ದಕ್ಷಿಣಕ್ಕೆ ರಾಜಕಾಲುವೆ ಇದೆ ಎಂದರೆ ಇರಬಹುದು. ಇಲ್ಲಿಯವರೆಗೆ ಪ್ರತಿವಾದಿಯರೇ ಆ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಇಲ್ಲ ಬೇರೆಯವರು ಇದ್ದಾರೆ ಎನ್ನುತ್ತಾರೆ. ಸರ್ವೆ ನಂ.೩/೮ ನೇದರ ಪಹಣಿಯಲ್ಲಿ ೨ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಇರಬಹುದು. ಅವರ ತಾತನ ಕಾಲದಿಂದ ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮುನಿಕದಿರಪ್ಪ ಮತ್ತು ಅವರ ಕುಟುಂಬಸ್ಥರು ಆ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಚಕ್ಕುಬಂದಿ ತೋರಿಸಲು ಕ್ರಯ ಪತ್ರ ಹಾಜರುಪಡಿಸಿದ್ದೇನೆ. ದಾವಾ ಆಸ್ತಿ ಸ್ವಾಧೀನದಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.೩ ಇದು ಮೂಲತ: ಗೋಮಾಳ ಜಮೀನು ಎಂದರೆ ಇರಬಹುದು. ನಿಪಿ.೨ ರಲ್ಲಿ ಕ್ರಯ ಪತ್ರದ ದಿನಾಂಕ ೧೧.೧೧.೧೯೮೦ ಎಂದು ನಮೂದಿದೆ ಎಂದರೆ ಸರಿ. ನಿಪಿ.೧ ಕ್ರಯ ಪತ್ರ ದಿ: ೫.೦೯.೧೯೮೦ ಎಂದರೆ ಸರಿ. ಸರ್ವೆ ನಂ.೩/೮ ನೇದರ ಎಲ್ಲಾ ಕಂದಾಯ ದಾಖಲೆಗಳು ೨ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ನಮಗೆ ತೊಂದರೆ ನೀಡಿದರು ಎಂದು ಹೇಳಲಾಗುವ ದಿನಾಂಕ ತಿಂಗಳು ವರ್ಷ ನೆನಪಿಲ್ಲ. ದೂರು ನೀಡಿದ ದಿನಾಂಕ ನೆನಪಿಲ್ಲ. ದೂರು ನಾನು ನೀಡಿಲ್ಲ ಎಂದರೆ ಸರಿ. ನಮ್ಮ ಸಂಬಂಧೀಕರು ರಮೇಶ್ ರವರು ದೂರು ನೀಡಿದ್ದಾರೆ ಎಂದರೆ ಸರಿ.

( ಈ ಹಂತದಲ್ಲಿ ಶ್ರೀ ಎ.ಪಿ.ಆರ್. ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

ಪಿ.ಡಬ್ಲ್ಯೂ–೨
ದಿ: ೨೭.೦೯.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎ.ಪಿ.ಆರ್. ವಕೀಲರಿಂದ,

ನಾನು ಪಿ.ಯು.ಸಿ ಓದಿದ್ದೇನೆ, ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ್ ಸ್ವಲ್ಪ ಬರುತ್ತದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಅಂತಾ ಗೊತ್ತಿಲ್ಲ ಎಂದರೆ ಸರಿ. ವಾದಿ ನನ್ನ ಸಂಬಂಧೀಕರು ಎಂದರೆ ಸರಿಯಲ್ಲ, ಅವರು ನಮ್ಮೂರಿನವರು. ಈ ಕೇಸನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಸರ್ವೆ ನಂ.೩ ಮೂಲತ: ಗೋಮಾಳ ಜಮೀನು ಎಂದರೆ ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ.೩ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ.೩/೧೪ ಎಂದು ಇರುತ್ತದೆ. ದಾವಾ ಆಸ್ತಿ ಸಾದಪ್ಪನಹಳ್ಳಿಯಲ್ಲಿದೆ. ದಾವಾ ಆಸ್ತಿ ಚಕ್ಕುಬಂದಿ ಪೂ–ಚೌಡಪ್ಪ ಜಮೀನು, ಪ–ಮಾರಪ್ಪನ ಜಮೀನು, ಉ–ಹನುಮಂತಪ್ಪ ಜಮೀನು, ದ–ಕಾಲುವೆ ಇರುತ್ತದೆ. ದಾವಾ ಆಸ್ತಿ ಪೊಡಿ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಎಲ್ಲಿದೆ ಎಂದು ಗೊತ್ತಿದೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಾದಿ ಕ್ರಯಕ್ಕೆ ಪಡೆದಿದ್ದಾರೆ. ದಿನಾಂಕ ವರ್ಷ ಗೊತ್ತಿಲ್ಲ, ಸುಮಾರು ೪೦ ವರ್ಷ ಆಗಿರಬಹುದು. ನನಗೆ ಸಾಕ್ಷಿ ಹೇಳುವಂತೆ ವಾದಿ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಅವರು ಹೇಳಿದಂತೆ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.೩/೮ ೨ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಮತ್ತು ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪೊಡಿ ಆಗಿರುವ ಕುರಿತು ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ಗೊತ್ತಿಲ್ಲದಿದ್ದರು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

ಪಿ.ಡಬ್ಲೂ–೩
ದಿ: ೨೭.೦೯.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎ.ಪಿ.ಆರ್. ವಕೀಲರಿಂದ,

ನಾನು ಪಿ.ಯು.ಸಿ ಓದಿದ್ದೇನೆ, ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಈ ಕೇಸನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಸರ್ವೆ ನಂ.೩ ಮೂಲತ: ಗೋಮಾಳ ಜಮೀನು ಎಂದರೆ ಸರಿ. ಮೂಲ ಸರ್ವೆ ನಂ.೩ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿ ವಾದಿಯ ಹೆಸರಿನಲ್ಲಿದೆ. ೨೨ ಗುಂಟೆ ಅವರ ಹೆಸರಿನಲ್ಲಿದ್ದು, ಅದನ್ನು ಕ್ರಯಕ್ಕೆ ಪಡೆದಿದ್ದಾರೆ. ಯಾರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದು ಗೊತ್ತಿಲ್ಲ. ಕ್ರಯದ ದಿನಾಂಕ, ತಿಂಗಳು ವರ್ಷ ಗೊತ್ತಿಲ್ಲ.

ದಾವಾ ಆಸ್ತಿ ಪಹಣಿಯನ್ನು ನೋಡಿದ್ದೇನೆ, ವಾದಿ ಸ್ವಾಧೀನದಲ್ಲಿದ್ದಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಹೇಳುವಂತೆ ವಾದಿ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ.ದಾವಾ ಆಸ್ತಿ ಎಲ್ಲಿದೆ ಎಂದು ನೋಡಿದ್ದೇನೆ. ಅದು ಸಾದಪ್ಪನಹಳ್ಳಿಯಲ್ಲಿದೆ. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.೩/೮ ೨ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ೨ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಕರಣದ ಬಗ್ಗೆ ಗೊತ್ತಿಲ್ಲದಿದ್ದರು, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**